ಅ) ಬಂದಿದೆ.

ಇ) ಖಾಲಿ ಬಿದ್ದಿರುವ 17 ಹುದ್ದೆಗಳ ಪೈಕಿ 11 ಶಿಕ್ಷಕರ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಬಡ್ತಿಯ ಮೂಲಕ ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲಾಗುತ್ತಿದ್ದು, ಖಾಲಿ ಇರುವ ಉಳಿದ 6 ವೃತ್ತಿ ಶಿಕ್ಷಕರ ಹುದ್ದೆಗಳನ್ನು ಆ ನಂತರ ತುಂಬಲಾಗುವುದು.

ಉಡುಪಿ ಜಿಲ್ಲೆಯಲ್ಲಿನ ಪೋಸ್ಟ್‌ಮಾರ್ಟಂ ಸೆಂಟರ್ ಬಗ್ಗೆ.

1592 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಪೋಸ್ಟ್‌ಮಾರ್ಟಂ ಕೊಠಡಿ ಇಲ್ಲದೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಾವುವು?

ಆ) ಈ ಆರೋಗ್ಯ ಕೇಂದ್ರಗಳಲ್ಲಿ ಪೋಸ್ಟ್‌ಮಾರ್ಟಂ ಕೊಠಡಿಗಳ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 30 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಶವಾಗಾರ ಕೊಠಡಿ ಇರುವುದಿಲ್ಲ. ಪಟ್ಟಿ ಲಗತ್ತಿಸಿದೆ.

ಆ) ಬಂದಿದೆ.

ಇ) ಪ್ರಸಕ್ತ ಸಾಲಿನಲ್ಲಿ ಉಡುಪಿ ಜಿಲ್ಲೆಯ 6 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪೋಸ್ಟ್‌ಮಾರ್ಟಂ ಕೊಠಡಿಗಳನ್ನು ಒದಗಿಸಲಾಗಿದ್ದು 11 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಶವಾಗಾರಗಳು ನಿರ್ಮಾಣ ಹಂತದಲ್ಲಿವೆ. ಉಳಿದವುಗಳಿಗೆ ಹಂತ ಹಂತವಾಗಿ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಉಡುಪಿ ಜಿಲ್ಲೆಯಲ್ಲಿ ಪೋಸ್ಟ್ ಮಾರ್ಟಂ ಕೊಠಡಿ ಇಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪಟ್ಟಿ

1) ಪ್ರಾ.ಆ. ಕೇಂದ್ರ, ಶಿರೂರು	16) ಪ್ರಾ.ಆ. ಕೇಂದ್ರ, ಕುಕ್ಕೇಹಳ್ಳಿ
2) ಪ್ರಾ.ಆ. ಕೇಂದ್ರ, ಹಾಲಾಡಿ	17) ಪ್ರಾ.ಆ. ಕೇಂದ್ರ, ನಾಸ್ತಾನ
3) ಪ್ರಾ.ಆ. ಕೇಂದ್ರ, ಮಣಿಪುರ	18) ಪ್ರಾ.ಆ. ಕೇಂದ್ರ, ಸಾಲಿಗ್ರಾಮ
4) ಪ್ರಾ.ಆ. ಕೇಂದ್ರ, ಗಂಗೊಳ್ಳಿ	19) ಪ್ರಾ.ಆ. ಕೇಂದ್ರ, ಕಿಮ್ಮಣ್ಣು
5) ಪ್ರಾ.ಆ. ಕೇಂದ್ರ, ಶಂಕರನಾರಾಯಣ	20) ಪ್ರಾ.ಆ. ಕೇಂದ್ರ, ಹಿರೇಬಿಟ್ಟು
6) ಪ್ರಾ.ಆ. ಕೇಂದ್ರ, ಬೆಳ್ವೆ	21) ಪ್ರಾ.ಆ. ಕೇಂದ್ರ, ಕೋಡಿಬೆಂಗ್ರೆ
7) ಪ್ರಾ.ಆ. ಕೇಂದ್ರ, ಸಾಲಿಗ್ರಾಮ	22) ಪ್ರಾ.ಆ. ಕೇಂದ್ರ, ಕಲ್ಲಮುಂಡ್ಕೂರು
8) ಪ್ರಾ.ಆ. ಕೇಂದ್ರ, ಕುಂಬಾಶಿ	23) ಪ್ರಾ.ಆ. ಕೇಂದ್ರ, ನೆಲ್ಲಿಕಾರು
9) ಪ್ರಾ.ಆ. ಕೇಂದ್ರ, ಕಿರಿಮಂಜೇಶ್ವರ	24) ಪ್ರಾ.ಆ. ಕೇಂದ್ರ, ಪಳ್ಳಿ
10) ಪ್ರಾ.ಆ. ಕೇಂದ್ರ, ಕೆದೂರು	25) ಪ್ರಾ.ಆ. ಕೇಂದ್ರ, ಹಿರ್ಗಾನ
11) ಪ್ರಾ.ಆ. ಕೇಂದ್ರ, ಆಲೂರು	26) ಪ್ರಾ.ಆ. ಕೇಂದ್ರ, ಮಾಳ
12) ಪ್ರಾ.ಆ. ಕೇಂದ್ರ, ಪೇತ್ರಿ	27) ಪ್ರಾ.ಆ. ಕೇಂದ್ರ, ಬೈಲೂರು
13) ಪ್ರಾ.ಆ. ಕೇಂದ್ರ, ಕಾಪು	28) ಪ್ರಾ.ಆ. ಕೇಂದ್ರ, ಸಚ್ಚರಿಪೇಟೆ
14) ಪ್ರಾ.ಆ. ಕೇಂದ್ರ, ಸಾಬರಕಟ್ಟೆ	29) ಪ್ರಾ.ಆ. ಕೇಂದ್ರ, ಇರ್ವತ್ತೂರು
15) ಪ್ರಾ.ಆ. ಕೇಂದ್ರ, ಮಲ್ಪೆ	30) ಪ್ರಾ.ಆ. ಕೇಂದ್ರ, ಬೆಳುವಾಯಿ

ಕುಂದಾಪುರ ತ್ಹಾಲೂಕು ಕೋಣೆ ಗ್ರಾಮ ಪಂಚಾಯತ್‌ನ ಅಧಿಕಾರ ದುರುಪಯೋಗ.

1593 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಕೋಣೆ ಗ್ರಾಮ ಪಂಚಾಯತ್‌ನ ವ್ಯಾಪ್ತಿಯಲ್ಲಿರುವ ಪರವಾನಿಗೆ ಹೊಂದಿದ ಅಂಗಡಿಗಳೆಷ್ಟು? ಪರವಾನಿಗೆ ಹೊಂದದ ಅಂಗಡಿಗಳೆಷ್ಟು? (ಪರವಾನಿಗೆ ಹೊಂದಿದ ಅಂಗಡಿಗಳ ವಿವರ ನೀಡುವುದು)

ಆ) ಪರವಾನಿಗೆ ಪಡೆದಿಲ್ಲವೆಂಬ ಕಾರಣಕ್ಕೆ ಅಂಗಡಿಗಳಿಗೆ ಬೀಗ ಹಾಕಿರುವುದು ನಿಜವೇ?

ಇ) ಅಧಿಕಾರ ದುರುಪಯೋಗ ಮಾಡಿದ ಪಂಚಾಯತ್ ಕಾರ್ಯದರ್ಶಿಯವರ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?